ಅಲ್ಲಿಯ ಸಾಹಿತ್ಯ ಸಂಸ್ಕೃತಿಯ ಅಧ್ಯಯನವನ್ನು ಮಾಡಿಸಬೇಕು. ಕನ್ನಡದ ಬಹುಮುಖ್ಯ ಕೃತಿಗಳೂ ಬೇರೆ ಭಾಷೆಗಳಿಗೆ ಅನುವಾದಗೊಳ್ಳುವಂತೆ ಪರಭಾಷೆಯ ಅನುವಾದಕರೊಂದಿಗೆ ಸಂಪರ್ಕವಿರಿಸಿಕೊಂಡು, ಅವರ ಮೂಲಕ ಈ ಕಾರ್ಯವನ್ನು ಮಾಡಿಸಬೇಕು. ಕನ್ನಡದ ಕಾರಂತ, ಭೈರಪ್ಪ, ಕಾರ್ನಾಡ ಇಂದು ಭಾರತೀಯ ಭಾಷೆಗಳಲ್ಲಿ ಅಪಾರ ಬೇಡಿಕೆಯ ಲೇಖಕರಾಗಿದ್ದಾರೆ. ಮರಾಠಿಯಲ್ಲಂತೂ ಮನೆ ಮಾತಾಗಿದ್ದಾರೆ. ಅಲ್ಲಿ ಶರಚ್ಚಂದ್ರ ಚಟರ್ಜಿ, ಭೈರಪ್ಪ ಅವರಿಗೆ ಅತಿ ಹೆಚ್ಚಿನ ಬೇಡಿಕೆ ಇದೆ.

**5**

ಬೇರೆ ಭಾಷೆಯ ಕಾದಂಬರಿ, ಆತ್ಮಕತೆ, ಕತೆಗಳಿಗೆ ಬೇಡಿಕೆ ಇದೆ. ವ್ಯಕ್ತಿತ್ವ ವಿಕಸನ, ವಾಸ್ತುಶಾಸ್ತ್ರದಂತಹ ಪುಸ್ತಕಗಳೂ ಹೆಚ್ಚು ಮಾರಾಟವಾಗುತ್ತವೆ. ಹಿಂದೆ ಇಂಗ್ಲಿಷ್ ಪತ್ತೆದಾರಿ ಕಾದಂಬರಿಗಳಿಗೆ ಅಪಾರ ಬೇಡಿಕೆಯಿತ್ತು. ವಿವಾದಿತ ಕೃತಿಗಳಿದ್ದರೆ, ಅಂತಹ ವ್ಯಕ್ತಿಗಳಿದ್ದರೆ ಅಂಥ ಕೃತಿಗಳು ಹಾಟ್ ಕೇಕಿನಂತೆ ಮಾರಾಟವಾಗುತ್ತವೆ. ಕವಿತೆ, ಶಾಸ್ತ್ರಗಳನ್ನು ಕೇಳುವವರೇ ಇಲ್ಲ. ಓದುಗರೂ ಕಡಿಮೆ. ಕವಿತೆ ಮತ್ತು ಶಾಸ್ತ್ರ ಗ್ರಂಥಗಳನ್ನು ಪ್ರಕಾಶಕರು ಕೇಳುವುದೇ ಇಲ್ಲ. ಕೆಲವರ್ಷಗಳ ಹಿಂದೆ ಪ್ರಕಾಶಕರೊಬ್ಬರು ಫೋನ್ ಮಾಡಿ, ನಾವು ಹಾಕಿದ ಬಂಡವಾಳ ಹಿಂತಿರುಗಿ ಬರುವಂಥ ಪುಸ್ತಕಗಳನ್ನು ಭಾಷಾಂತರ ಮಾಡಿ ಕೊಡಿ ಎಂದರು! ಕನ್ನಡದಲ್ಲಿ ಗ್ರಂಥಾಲಯಗಳಿಗೆ ಮಾರುವ ಪ್ರಕಾಶಕರೇ ಹೆಚ್ಚಾಗಿದ್ದಾರೆ. ಅಂಥಲ್ಲಿ ಓದುಗರ ಬೇಡಿಕೆಯ ಪ್ರಶ್ನೆ ಬರುವುದೇ ಇಲ್ಲ.

